ಹುಟ್ಟಿದಾಗಿನಿಂದ ಆ ಪರಿಸರವನ್ನೆಲ್ಲಾ ವ್ಯಾಪಿಸಿ ನಿಂತಿದ್ದ ಅಮ್ಮತನ – ಅದಿಲ್ಲವಾದಾಗ ಆ ಅವಕಾಶವನ್ನು ವ್ಯಾಪಿಸುವ ಖಾಲಿಗಳು ಅನಿವಾರ್ಯ. ಹುಟ್ಟಿ ಬೆಳೆದ ಮನೆ, ಹೊಗೆಯ ಹೊದಿಕೆಗಳಲ್ಲೆ ಎಲ್ಲರ ಹೊಟ್ಟೆಗೆ ತಂಪೆರೆಯುತ್ತಿದ್ದ ಅಡಿಗೆಕೋಣೆ, ನುಣುಪು ನೆಲದ ಮಲಗುವ ಕೋಣೆ, ಹೊರಗೆ ಆಟವಾಡಿದ ಅಂಗಳ, ಜಗಳವಾಡಿದ ಜಗಲಿಯೂ ಜೀವಂತವಾಗಿತ್ತು. ಈಗೆಲ್ಲವೂ ನಿರ್ಭಾವದ ಒಂದೇ ಫ್ರೇಮಿನೊಳಗೆ ಕೂತಂತಿವೆ. ಹಿಂದೆ ಹೊರಜಗಲಿಯಲ್ಲಿ ಸದಾಕಾಲ ಕಾಫಿ, ತಿಂಡಿ, ಊಟ, ತಾಂಬೂಲ ಅಂತ ಕಾದಿರುತ್ತಿದ್ದ ಕೆಲಸದವರು ಅದೆಲ್ಲಿ ಮರೆಯಾದರು? ಆ ಕಡೆ ಭತ್ತ ಕುಟ್ಟುತ್ತಿದ್ದ ಜಾಗದ ಸುತ್ತ ಹುತ್ತವೇ ಬೆಳೆದು ನಿಂತಿದೆಯೆ? ಸಾಲುಗಟ್ಟಿ ಸಾಗುವ ಗೆದ್ದಲುಗಳ ಚುರುಕಿನ ಓಡಾಟವೊಂದೇ ಜೀವಂತಿಕೆಯ ಸಂಕೇತ. ಎಲಿಸಾ, ನೆಬಿಸಾ, ಕಲ್ಯಾಣಿ, ಕಾರ್ಚಿಯರು ಅಕ್ಕಿ ಮಾಡ್ತಾಯಿದ್ದಾಗ ಅಲ್ಲೆ ಪಕ್ಕದಲ್ಲಿ ಅಮ್ಮ ಬಂದು ಕೂರುತ್ತಿದ್ದ, ಮಾತು ಮಲ್ಲಿಗೆಯಾಗಿ ಪೋಣಿಸುತ್ತಿದ್ದ ಮಣ್ಣ ಚಿಟ್ಟೆ ಅರ್ಧದಷ್ಟೇ ಉಳಿದಿದೆ. ಒಳಗೆ ಕೆಲಸವೆಲ್ಲಾ ಬಾಕಿ ಬಿದ್ದಿದ್ದರೂ ಅಮ್ಮ ಅವರ ಹಂಬಲ ಅರಿತು ಬಂದೇ ಬರುತ್ತಿದ್ದಳು. ಆಕೆಯೊಂದಿಗೆ ಸುಖದುಃಖ ಹಂಚಿಕೊಂಡು ಹಗುರಾಗಿ ಅವರೆಲ್ಲ ಹೊಸ ಹುರುಪು ತುಂಬಿರುತ್ತಿದ್ದರು. ಎಲ್ಲ ಕೆಲಸಗಳಲ್ಲಿ ಪೂರ್ಣ ಪರಿಣತಿ ಪಡೆದಿದ್ದ ಅಮ್ಮ ಜತೆಸೇರಿದಾಗ ಎಲ್ಲರಿಗೂ ತೀರ ಸಂಭ್ರಮ.

ವಯಸ್ಸಿನಲ್ಲಿ ಅಮ್ಮನಿಗಿಂತ ತುಂಬ ಹಿರಿಯರಾಗಿದ್ದ ಅಪ್ಪ ತೀರಿಕೊಂಡಾಗ ಅಸಹಜ ಅನಿಸಿರಲಿಲ್ಲ. ಆಮೇಲೆ ಸುಳಿವೇ ನೀಡದೆ ಎಳೆದೊಯ್ದ ಅಮ್ಮನ ಮೃತ್ಯು ಮಾತ್ರ ಅನಿರೀಕ್ಷಿತವಾಗಿ ಆಘಾತವೇ ಆಗಿತ್ತು. ಆಕೆ ತನ್ನ ಸುತ್ತಲೂ ಕಟ್ಟಿ ನಿಲ್ಲಿಸಿದ ಸೌಹಾರ್ದದ ಸೌಧವೊಂದು ನೆಲಸಮವಾದಂತಾಯ್ತು. ಪೇರಿಸಿದ ಸ್ನೇಹದ ಇಟ್ಟಿಗೆಗಳೆಲ್ಲಾ ಕಳಚಿಕೊಂಡು ಚೆಲ್ಲಾಡಿದವು. ಯಾವ ಹೆಚ್ಚುಗಾರಿಕೆಯನ್ನೂ ಹೊಂದಿರದಾಕೆ, ಯಾವುದೇ ತರಬೇತಿಯಿಲ್ಲದೆ ಮನುಷ್ಯ ಸಂಬಂಧಗಳ ಪ್ರತೀಕವಾಗಿ ಬದುಕಿದ ರೀತಿ – ನಿಸರ್ಗದ ಸಹಜವಾದ ಒಂದು ಸಂಪನ್ನತೆಯೆನಿಸಿತ್ತು. ಪರಮಸಾತ್ವಿಕರಾಗಿದ್ದ ಅಪ್ಪ ಸಂಧ್ಯಾವಂದನೆ, ಪೂಜೆ, ದಾನ–ಧರ್ಮಗಳಲ್ಲೆ ಹೆಚ್ಚಿನ ಮಗ್ನತೆಯಿಂದಿದ್ದವರು. ಕಾಯಕವೇ ಪೂಜೆಯಾಗಿದ್ದ ಅಮ್ಮ, ಪೂಜೆಯೇ ಕಾಯಕವಾಗಿದ್ದ ಅಪ್ಪನನ್ನು ಎಂದೂ ಕಡೆಗಣಿಸಿರಲಿಲ್ಲ. ಆದರಿಸಿ ಆಧಾರವೇ ಆಗಿದ್ದಳು. ತೋಟ–ಗದ್ದೆಗಳನ್ನೂ ಅಲ್ಲಿಗೇ ಪಾಳುಬೀಳದಂತೆ ಉಳಿಸಿ ಬೆಳೆಸುವ ಕೆಲಸ ಸುಲಭವಾಗಿರಲಿಲ್ಲ. ಬದುಕು ಕಟ್ಟಲು ನೆರವಾದವರನ್ನೆಂದೂ ಮರೆಯುವಂತಿರಲಿಲ್ಲ. ತೋಟಕಾವಲಿನ ಕರ್ನಾಳ, ಆಚೆಬದಿಯ ಅಬ್ದುಲ್ಲ, ಒಕ್ಕಲುಮನೆಯಲ್ಲಿದ್ದ ವೇಲಾಯುಧ ಎಲ್ಲರೂ ಸಮನ್ವಿತರಾಗಿ ನೀಡಿದ ನೆರವು, ಹೂಡಿದ ಪರಿಶ್ರಮ ಸದಾ ಸ್ಮರಣೀಯ. ಅಮ್ಮ ನೀಡುವ ತಟ್ಟೆಯ ಅನ್ನಕ್ಕೆ ಹೊಟ್ಟೆಯ ವಾತ್ಸಲ್ಯವೂ ಬೆರೆತ ಸ್ವಾದವಿರುತ್ತಿತ್ತು. ಎಲ್ಲರಿಗೂ ಬೇಯಿಸಿಹಾಕಿ ಹೊರದುಡಿಮೆಗೂ ಓಡುತ್ತಿದ್ದ ಅಮ್ಮನ ದಣಿವು ಇನ್ನೂ ಕಣ್ಣಂಚಿನಲ್ಲಿದೆ. ನಮಗೆ ಅದು ಅಸಹನೀಯ ಅನಿಸ್ತಾಯಿತ್ತು. ನನಗಿಂತ ನಾಲ್ಕಾರು ವರ್ಷ ಹಿರಿಯನಿದ್ದ ಅಣ್ಣ ಮನೋಹರ ತನ್ನ ಕ್ಷಮತೆಯಿಂದಲೆ ಬಹಳ ಬೇಗನೆ ಎಲ್ಲದರಲ್ಲೂ ಒಳಗೊಳ್ಳುವಂತಾದ. ಓದು ಮುಗಿದಾಗ ಅವನಿಗೆ ಊರ ಬ್ಯಾಂಕಿನಲ್ಲೆ ಕೆಲಸ ಸಿಕ್ಕಿದುದು ಅಮ್ಮನ ಅದೃಷ್ಟವೇ ಅಂತನಿಸಿತು. ವ್ಯಾವಹಾರಿಕ ಕೌಶಲ್ಯದೊಡನೆ ಪರಿಶ್ರಮವೂ ಸೇರಿ ಅಣ್ಣ ಗೆಲುವಿನ ಮೆಟ್ಟಿಲುಗಳನ್ನು ಒಂದೊಂದಾಗಿ ಏರುವಂತಾಯ್ತು. ಅಕ್ಕಪಕ್ಕದಲ್ಲಿದ್ದ ತೋಟ–ಜಮೀನುಗಳನ್ನು ಒಂದೊಂದಾಗಿ ಖರೀದಿಸುತ್ತ ಊರಲ್ಲಿ ಗಮನೀಯ ವ್ಯಕ್ತಿಯಾದ. ಮನೆಯೊಂದು ಮನೆತನವಾದಂತೆ ಅಮ್ಮನ ಅಮ್ಮತನದಿಂದ ಒಳಗೆ ಬಂದವರಿಗೆಲ್ಲಾ ತವರಿನಂತಿದ್ದು ತನ್ನತನದ ಪ್ರಭಾವಲಯವೊಂದು ಆವರಿಸಿ ನಿಂತಿತು. ಉಳಿದವರಲ್ಲಿ ತನ್ನನ್ನು ಕಳೆದುಕೊಳ್ಳುತ್ತಲೇ ಅಮ್ಮ ತನ್ನದೇ ಆದ ವ್ಯಕ್ತಿತ್ವವನ್ನು ಗಳಿಸಿಕೊಂಡಿದ್ದಳು.

ಜಾತಿ–ಮತಗಳ ಅಂತರ ಅಳಿಸಿ ಈ ಬ್ರಾಹ್ಮಣ ಕುಟುಂಬಕ್ಕೊಂದು ತಳಹದಿಗೆ ಮಾದರಿಯಾದ